

# ಹೂವಿನಿಂದ ಮೆನಿಕ್ಯೂರ್

ಹೂವುಗಳ ಅಂದ ವರ್ಣಸಲಸದಳ. ಹೂವಿನ ಉಪಯೋಗಗಳೂ ಹತ್ತಾರು. ಸೌಂದರ್ಯವರ್ಧನೆಯಲ್ಲಿ ಹೂವುಗಳ ಪಾತ್ರ ಮಹತ್ವದ್ದು. ಗುಲಾಬಿ, ಮಲ್ಲಿಗೆ, ಚೆಂಡುಹೂವು ಮುಂತಾದವುಗಳನ್ನು ಬಳಸಿ ಮೆನಿಕ್ಯೂರ್ ಮಾಡಿಕೊಳ್ಳಬಹುದು.

■ ಶಾರದಾ ಪಿ.ಬಿ.

ಹೂವೆಂದರೆ ಸೌಂದರ್ಯ. ಈ ಹೂವಿನಿಂದಲೂ ನಮ್ಮ ಸೌಂದರ್ಯವನ್ನು ವೃದ್ಧಿಸಿಕೊಳ್ಳಬಹುದು. ಪೆಡಿಕ್ಯೂರ್, ಮೆನಿಕ್ಯೂರ್‌ಗಳಲ್ಲಿ ಹೂವುಗಳ ಪಾತ್ರ ಮಹತ್ವದ್ದು. ಮುಖದ ಅಂದ, ತಲೆ ಕೂದಲಿನ ಸೌಂದರ್ಯದ ಬಗ್ಗೆ ಹೇಗೆ ಕಾಳಜಿ ವಹಿಸುತ್ತೇವೆಯೋ ಅಷ್ಟೇ ಪ್ರಾಮುಖ್ಯತೆಯನ್ನು ಕೈ ಹಾಗೂ ಕಾಲಿನ ಸೌಂದರ್ಯಕ್ಕೂ ಕೊಡಬೇಕು. ಪ್ರತಿದಿನ ಹಲವಾರು ಕೆಲಸವನ್ನು ಮಾಡುವ ಕೈಗಳು ಬೇಗನೆ ಒರಟಾಗಿ ನೆರಿಗೆಗಳು ಮೂಡುತ್ತವೆ. ಆದ್ದರಿಂದ ಮೆನಿಕ್ಯೂರ್ ಮಾಡಿಕೊಳ್ಳುವುದು ಅವಶ್ಯಕ. ವಾರದಲ್ಲಿ ಒಮ್ಮೆ ಮಾಡಿಕೊಂಡರೂ ಸಾಕು. ಕೈಗಳು ನಯವಾಗಿ, ಯೌವನಭರಿತವಾಗಿ ಕಾಣುತ್ತವೆ. ಜೊತೆಗೆ ಉಗುರಿನ ಬೆಳವಣಿಗೆಗೆ ಇದು ಸಹಕಾರಿ. ಇದರಿಂದ ಚರ್ಮ ಒಡೆಯುವುದನ್ನು ತಪ್ಪಿಸಬಹುದು ಹಾಗೂ ಬಣ್ಣಗೆಟ್ಟ ಉಗುರಿಗೆ ಹೊಸ ಕಾಂತಿ ದೊರೆಯುತ್ತದೆ. ಹೂವಿನಲ್ಲಿ ಅನೇಕ ಸತ್ವಗಳಿರುವುದರಿಂದಾಗಿ ಕೈಗಳಿಗೂ ಹಿತಕರ.

ಗುಲಾಬಿ: ಕೈಗಳನ್ನು ಚೆನ್ನಾಗಿ ತೊಳೆದು ಒಣಗಿಸಿ. ನಂತರ ಉಗುರಿನಲ್ಲಿ ಸೇರಿಕೊಂಡಿರುವ ಕೊಳೆಯನ್ನು ತೆಗೆಯಿರಿ. ಒಂದು ಪಾತ್ರೆಯಲ್ಲಿ ಬಿಸಿ ನೀರನ್ನು ಹಾಕಿ 10–12 ಗುಲಾಬಿ ದಳಗಳನ್ನು ಹಾಕಿ ಇಡಿ. ಸ್ವಲ್ಪ ಸಮಯದ ಬಳಿಕ ನಿಮ್ಮ ಕೈಗಳನ್ನು ಅದರಲ್ಲಿಡಿ. 10 ನಿಮಿಷ ಬಿಟ್ಟು ಕೈಗಳನ್ನು ತಣ್ಣೀರಿನಲ್ಲಿ ತೊಳೆದು ಒರೆಸಿಕೊಂಡು ಒಂದು ಚಮಚ ಒಣಗಿಸಿ ಪುಡಿ ಮಾಡಿದ ಗುಲಾಬಿ ಹೂವಿಗೆ 1–2 ಚಮಚ ಗುಲಾಬಿ ಜಲ ಬೆರೆಸಿ ಕೈಗಳಿಗೆ ಚೆನ್ನಾಗಿ ಮಸಾಜ್ ಮಾಡಿಕೊಳ್ಳಿ. ಒಂದು ನಿಮಿಷ ಮಸಾಜ್ ಮಾಡಿದ ಬಳಿಕ ಚೆನ್ನಾಗಿ ತೊಳೆದು ಕೋಲ್ಡ್ ಕ್ರೀಮ್ ಹಚ್ಚಿಕೊಳ್ಳಿ. ಈ ಹೂವು ಚರ್ಮದ ಆರ್ದ್ರತೆ ಹೆಚ್ಚಿಸುವಲ್ಲಿ ಸಹಕಾರಿ. ಜೊತೆಗೆ ಉಗುರಿನ ಹೊಳಪನ್ನು ಹೆಚ್ಚಿಸಿ ಒಳ್ಳೆಯ ಬಣ್ಣ ಕೊಡುತ್ತದೆ.

ಲ್ಯಾವೆಂಡರ್ ಹೂವು: ಈ ಹೂವು ಆ್ಯಂಟಿ ಫಂಗಸ್ ಹಾಗೂ ಆ್ಯಂಟಿ ಬ್ಯಾಕ್ಟೀರಿಯಲ್. ಎಕ್ಸೀಮಾದಂತಹ ಚರ್ಮದ ಸಮಸ್ಯೆಗೆ ಉತ್ತಮ ಪರಿಹಾರ. ಇದನ್ನು ಹಲವಾರು ರೀತಿಯ ಸೌಂದರ್ಯಗಳಲ್ಲಿ ಉಪಯೋಗಿಸಲಾಗುತ್ತಿದೆ. ಶ್ಯಾಂಪೂ, ಸುಗಂಧ ದ್ರವ್ಯ ಹಾಗೂ ಮುಖದ ಕ್ರೀಮ್‌ಗಳಲ್ಲಿ ಈ ಹೂವನ್ನು ಹೆಚ್ಚಾಗಿ ಬಳಸಲಾಗುತ್ತದೆ.

ಪ್ರಥಮವಾಗಿ ಉಗುರಿಗೆ ಹಚ್ಚಿಕೊಂಡಿರುವ